ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಮೇ 16, 2020

## PRESS RELEASE

## After a rare and Complex Cardiac Surgery woman delivers a baby !

**BENGALURU, MAY 16 ( KARNATAKA INFORMATION ) :**

A 27-year old woman Ms Pavitra, wife of Mr Devaraj, an agriculturist from Tiptur Taluk in Tumkur Diistrict had a very severe and relatively rare cardiac condition in which her Aortic valve was diseased along with having a dilated Aorta.

This is a life threatening condition termed Ascending Aorta Aneurysm, wherein the Aorta gets dilated like a balloon.

.

Dr Tameem Ahmed and team of the Sapthagiri Super Speciality Hospital had immediately attended the patient and performed a Complex Cardiac Surgery on her in 2017, in which the diseased Aorta (outlet of the Heart) was excised and replaced with an artificial Tube graft in its position. Additionally, an artificial indigenous Mechanical Valve was implanted in the place of the diseased valve.

This surgery which costs any where between Rs Five Lakh and Rs Eight Lakh would have been otherwise impossible for her family to afford, was performed free under the Government of Karnataka’s. Arogyasri Scheme.

Post surgery the patient recovered and was able to get back to her routine life and even conceiving a child. Given her previous condition, it was anxious moments with her delivery slated in midst of the Covid-19 lockdown.

However, the spirit of service pervaded all involved including the Taxi Driver who dropped them free of charge to the hospital aided by seamless facilitation between Asha workers and Police coordinated by Dr Tameem Ahmed

caesarean section was performed on the patient by Dr Padmashree led Team, helping deliver a healthy baby girl.

Highlights :

- Lady from an agriculturist's family in rural Karnataka was 27 years at time of surgery.
- Relatively rare and severe disease: SEVERE AORTIC REGURGITATION + ASCENDING AORTIC ANEURYSM.
- Complex Cardiac Surgery performed: BENTALL & HEMIARCH.
- Indian Implants used: Artificial Indian Mechanical Valve and Artificial Tube for reconstruction.
- Otherwise prohibitively expensive surgery was performed free under Arogyasri scheme.
- Baby delivered on April 29, 2020.

**ಪತ್ರಿಕಾ ಪ್ರಕಟಣೆ**

## ಕಾಳಿಂಗ ಸರ್ಪ ಮತ್ತು ಫ್ಲೆಮಿಂಗೊ ದತ್ತು ಸ್ವೀಕಾರ

**ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ):**

ಡಾ : ಪುಷ್ಪಾ ಅಯ್ಯಂಗಾರ್ ಮತ್ತು ವೈದೇಹಿ ಮೈಸೂರು ಅವರು 20,000 ರೂ. ಪಾವತಿಸಿ ಮೈಸೂರು ಮೃಗಾಲಯದ "ಕಾಳಿಂಗ ಸರ್ಪ ಮತ್ತು ಫ್ಲೆಮಿಂಗೊ" ಪ್ರಾಣಿಯನ್ನು ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ.

## ಇ–ಬೇಸಿಗೆ ಶಿಬಿರ

**ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ) :**

ಶ್ರೀ ಚಾಮರಾಜೇಂದ್ರ ಮೃಗಾಲಯವು ಮೇ 28 ರಿಂದ ಜೂನ್ 6 ರವರೆಗೆ 12 ರಿಂದ 18 ವರ್ಷದ ವಯೋಮಿತಿಯ ವಿದ್ಯಾರ್ಥಿಗಳಿಗಾಗಿ ಇ–ಬೇಸಿಗೆ ಶಿಬಿರವನ್ನು 10 ದಿನಗಳ ಅವಧಿಗೆ ನಡೆಸಲು ಉದ್ದೇಶಿಸಿದೆ.

ಪ್ರಕೃತಿ ಮತ್ತು ವನ್ಯ ಪ್ರಾಣಿಗಳ ಸಂರಕ್ಷಣೆ ಹಾಗೂ ಜೈವಿಕ ವೈವಿಧ್ಯತೆಗಳ ಬಗ್ಗೆ ಮಕ್ಕಳಿಗೆ ತಿಳಿಸುವುದು ಈ ಶಿಬಿರದ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಮೃಗಾಲಯದಲ್ಲಿ ಇರುವ ಪ್ರಾಣಿಗಳ ನಿರ್ವಹಣೆ, ಪ್ರಾಣಿಗಳ ವರ್ತನಿಯ ಅಧ್ಯಯನಗಳು, ವನ್ಯಜೀವಿ ಕಾನೂನು ಹಾಗು ಜಲಮೂಲಗಳ ಸಂರಕ್ಷಣೆಯ ಬಗ್ಗೆ ಈ ಶಿಬಿರದ ಮೂಲಕ ಕಲಿಯಬಹುದಾಗಿದೆ.

ಆಸಕ್ತಿಯುಳ್ಳವರು ಶಿಬಿರದ ಸದಸ್ಯತ್ವ ಪಡೆಯಲು ಅರ್ಜಿಯನ್ನು ಮೇ 25 ರ ಒಳಗೆ ಮೃಗಾಲಯದ ವೆಬ್‌ಸೈಟ್‌ನಲ್ಲಿ (www.mysorezoo.info) ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ:0821-2520302/2440752 ಹಾಗು ಮೊಬೈಲ್ ಸಂಖ್ಯೆ:9686668099ಗೆ ಕರೆ ಮಾಡಬಹುದು ಹಾಗೂ ಮೃಗಾಲಯದ ವೆಬ್‌ಸೈಟ್‌ನಲ್ಲೂ ಮಾಹಿತಿ ಲಭ್ಯವಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## King Cobra and Flamingo Adopted

**Bengaluru, May 16 (Karnataka Information)**

**Dr Pushapa Ayyangar and Vaidehi of Mysuru has adopted “King Cobra and Flamingo” from Mysuru Zoo for one year by making payment of Rs.20,000.**

## ಸ್ಪಷ್ಟೀಕರಣ

ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ):

ಕೋವಿಡ್ -19 ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶಕರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನೀಡಿರುವ ಟಿಪ್ಪಣಿಯು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದು ಈ ಬಗ್ಗೆ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಇದು ಅಧಿಕಾರಿಗಳ ಮಟ್ಟದಲ್ಲಿ ಚರ್ಚೆಗಾಗಿ ತಯಾರಿಸಿರುವ ಮಾಹಿತಿಯಾಗಿದ್ದು ಇದು ಅಧಿಕೃತ ಆದೇಶ ಅಥವಾ ಸುತ್ತೋಲೆಯಾಗಿರುವುದಿಲ್ಲ ಅಂತಹ ಯಾವುದೇ ನಿರ್ಧಾರ ತೆಗೆದುಕೊಂಡಿರುವುದಿಲ್ಲವೆಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಸ್ಪಷ್ಟೀಕರಣ ನೀಡಿದ್ದಾರೆ.

## ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ

ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ):

ಪ್ರತಿ ವರ್ಷ ಜೂನ್ 5ಕ್ಕೆ, 'ವಿಶ್ವ ಪರಿಸರ ದಿನಾಚರಣೆ'ಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿಶ್ವ ಸಂಸ್ಥೆಯು ಘೋಷಿಸಿರುವ ವಿಷಯದ ಕುರಿತಾಗಿ ಎಲ್ಲೆಡೆ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಬಾರಿಯ ಕೇಂದ್ರ ವಿಷಯ: 'ಜೀವಿವೈವಿಧ್ಯತೆಯನ್ನು ಆಚರಿಸೋಣ' (**Celebrating Biodiversity**). ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇದರ ಅಂಗವಾಗಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿದೆ.

ಲೇಖನ ಬರೆಯಲು ವಿಷಯಗಳು:

ಜೀವಿವೈವಿಧ್ಯತೆಯ ರಕ್ಷಣೆಯಿಂದ ಮಾನವನ ಪ್ರಗತಿ, ಕೊರೋನಾ ವೈರಸ್ ಪಿಡುಗು- ನಿಸರ್ಗ ಹಾಗೂ ಜೀವಿವೈವಿಧ್ಯತೆಗೆ ವರದಾನ, ಪರಿಸರ ಸಮತೋಲನೆಯಲ್ಲಿ ಜೀವಿವೈವಿಧ್ಯತೆಯ ಪಾತ್ರ.

ನಿಬಂಧನೆಗಳು

ಚಿತ್ರ ಬರೆಯಲು A3 ( Standard Size) ಹಾಳೆ ಬಳಸುವುದು. ಕ್ರೆಯಾನ್ಸ್, ಬಣ್ಣದ ಪೆನ್ಸಿಲ್, ಬ್ರಷ್ ಈ ಯಾವುದಾದರೂ ಸಾಮಗ್ರಿಗಳನ್ನು ಬಳಸಿ ಚಿತ್ರವನ್ನು ರಚಿಸಬಹುದು, ಲೇಖಕರು ತಮ್ಮ ಹೆಸರು, ವಿಳಾಸ, ಮೊಬೈಲ್/ದೂರವಾಣಿ ಇ-ಮೇಲ್ ಹಾಗೂ ಉದ್ಯೋಗದ ವಿವರಗಳನ್ನು ಕಡ್ಡಾಯವಾಗಿ ನಮೂದಿಸುವುದು, ಪ್ರತಿ ವಿಷಯದ ಅತ್ಯುತ್ತಮ ಐದು ಚಿತ್ರಗಳಿಗೆ (6-8, 9-12ನೇ ವರ್ಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕ) ನಗದು ಹಾಗೂ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತದೆ, ಒಬ್ಬರು ಒಂದು ವಿಷಯಕ್ಕೆ ಒಂದು ಚಿತ್ರವನ್ನು ಮಾತ್ರ ಬರೆಯತಕ್ಕದ್ದು, ಭಾಗವಹಿಸಿದ ಎಲ್ಲರಿಗೂ ಅಭಿನಂದನಾ ಪತ್ರ ನೀಡಲಾಗುವುದು, ಲೇಖನಗಳನ್ನು ಕರಾವಿಪ ಕಛೇರಿಗೆ ಕಳುಹಿಸಲು ಕೊನೆಯ ದಿನಾಂಕ: 31, ಮೇ 2020._____ಲೇಖನಗಳನ್ನು ಕಳಿಸಬೇಕಾದ ಇಮೇಲ್: krvp.info@gmail.comಅಥವಾ ವಾಟ್ಸ್‌ಅಪ್ ಸಂಖ್ಯೆ: 9483549159. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9008442557/ 9483549159 / 9880917831.

## ಮೂಲ ದಾಖಲೆ ಪರಿಶೀಲನೆ

ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ):

ಕರ್ನಾಟಕ ಲೋಕ ಸೇವಾ ಆಯೋಗವು 2018ನೇ ಸಾಲಿನ ವಿವಿಧ ನ್ಯಾಯಾಂಗ ಘಟಕಗಳಲ್ಲಿನ ಪ್ರಥಮ ದರ್ಜೆ ಸಹಾಯಕರ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಆಯೋಗದ ಕೇಂದ್ರ ಕಛೇರಿಯಲ್ಲಿ ನಿಗದಿಪಡಿಸಲಾಗಿದ್ದ ಮೂಲದಾಖಲೆಗಳ ಪರಿಶೀಲನೆಯನ್ನು ಕೊರೊನಾ ವೈರಸ್ (ಕೋವಿಡ್-19) ಸಾಂಕ್ರಾಮಿಕ

ರೋಗದ ಹರಡುವಿಕೆಯ ಕಾರಣ ರಾಜ್ಯಾದ್ಯಂತ ಲಾಕ್‌ಡೌನ್ ಇರುವ ಹಿನ್ನಲೆಯಲ್ಲಿ ಮತ್ತು ಮುಂಜಾಗ್ರತಾಕ್ರಮವಾಗಿ ಮುಂದೂಡಿ ಪ್ರಕಟಣೆಗಳನ್ನು ಸಹ ಹೊರಡಿಸಲಾಗಿತ್ತು.

ಆದರೆ, ಪ್ರಸ್ತುತ ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್–19) ಸಾಕ್ರಾಮಿಕ ರೋಗದ ಹರಡುವಿಕೆಯ ಹಿನ್ನಲೆಯಲ್ಲಿ ಲಾಕ್‌ಡೌನ್ ಇರುವುದರಿಂದ ಹಾಗೂ ಯವುದೇ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲದೇ ಇರುವುದರಿಂದ, ಅರ್ಹ ಅಭ್ಯರ್ಥಿಗಳನ್ನು ಖುದ್ದಾಗಿ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಲು ಕಷ್ಟವಾದ್ದರಿಂದ, ದಿನಾಂಕ:08–01–2020ರಂದು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅರ್ಹತಾ ಪಟ್ಟಿಯಂತೆ, ಮೂಲದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳು ಸದರಿ ಹುದ್ದೆಗಳ ಆನ್‌ಲೈನ್ ಅರ್ಜಿಯಲ್ಲಿ ಕೋರಲಾದ ಮೀಸಲಾತಿಗನುಗುಣವಾಗಿ ಪೂರಕ ಪ್ರಮಾಣ ಪತ್ರಗಳು, ಜನ್ಮದಿನಾಂಕ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪೂರಕ ಪ್ರಮಾಣ ಪತ್ರಗಳ ಮೇಲೆ ನಿಮ್ಮ ಸಹಿ, ಹೆಸರು, ನೋಂದಣಿ ಸಂಖ್ಯೆಯನ್ನು ನಮೂದಿಸಿದ ಸ್ವಯಂದೃಢೀಕೃತ ಎರಡು ಜೆರಾಕ್ಸ್ ಪ್ರತಿಗಳನ್ನು ಎರಡು ಭಾವಚಿತ್ರ, ಆನ್‌ಲೈನ್‌ಅರ್ಜಿ/ ಪ್ರವೇಶ ಪತ್ರದ ಪ್ರತಿಗಳು ಮತ್ತು ಯಾವುದಾದರೊಂದು ಗುರುತಿನಚೀಟಿ ಹಾಗೂ ಆನ್‌ಲೈನ್ ಮೂಲಕ ನೀಡಲಾದ ಆದ್ಯತಾ ಪ್ರತಿಯೊಂದಿಗೆ ಪ್ರಥಮದರ್ಜೆ ಸಹಾಯಕರ ಹುದ್ದೆಯ ಅಭ್ಯರ್ಥಿಗಳು “COURT FDA 2018” ಎಂಬ ಮತ್ತು ದ್ವಿತೀಯದರ್ಜೆ ಸಹಾಯಕರ ಹುದ್ದೆಯ ಅಭ್ಯರ್ಥಿಗಳು “COURT SDA 2018” ಎಂಬ ಶೀರ್ಷಿಕೆಯೊಂದಿಗೆ **ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001ಈ ವಿಳಾಸಕ್ಕೆ ದಿನಾಂಕ: 30–05–2020ರೊಳಗೆ** <u>ತಲುಪುವಂತೆ ಸ್ಪೀಡ್‌ಪೋಸ್ಟ್ ಅಂಚೆ ಮೂಲಕ ಮಾತ್ರ ಸಲ್ಲಿಸುವಂತೆ ಈಗಾಗಲೇ ಅರ್ಹ ಅಭ್ಯರ್ಥಿಗಳಿಗೆ ಸೂಕ್ತ ಹಿಂಬರಹಗಳನ್ನು ಜಾರಿ ಮಾಡಲಾಗಿದೆ. ಕೋವಿಡ್–19 ಅನ್ನು ನಿಯಂತ್ರಿಸುವ ಸಲುವಾಗಿ ಯಾವುದೇ ಕಾರಣಕ್ಕೂಆಯೋಗಕ್ಕೆ ಖುದ್ದಾಗಿ ಭೇಟಿ ನೀಡಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದಿಲ್ಲ.</u>

| | |
|---|---|
| <u>ವಿಶೇಷ ಸೂಚನೆ:</u> | <u>ಒಂದು ವೇಳೆ ಅಭ್ಯರ್ಥಿಗಳು ಆಯ್ಕೆಯಾದಲ್ಲಿ, ಅಭ್ಯರ್ಥಿಗಳು ಈ ಹಂತದಲ್ಲಿ ಸಲ್ಲಿಸುವಜೆರಾಕ್ಸ್ ಪ್ರತಿಗಳ ಮೂಲದಾಖಲೆಗಳ ಪರಿಶೀಲನೆಯ ಮತ್ತು ಅವುಗಳ ನೈಜತೆಗಳ / ಅಂಗವಿಕಲ (ಅಂಧ/ದೃಷ್ಟಿ ಮಾಂದ್ಯ ಅಭ್ಯರ್ಥಿಗಳ) ವೈದ್ಯಕೀಯತಪಾಸಣೆಯ ಷರತ್ತಿಗೊಳಪಟ್ಟಂತೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದರಿಂದ, ಅಭ್ಯರ್ಥಿಗಳು ದಾಖಲೆಗಳನ್ನು ಸಲ್ಲಿಸುವ ಸಮಯದಲ್ಲಿಅತಿಜಾಗರೂಕರಾಗಿ ದಾಖಲೆಗಳನ್ನು ಸಲ್ಲಿಸುವಂತೆ ಮತ್ತು ಇದಲ್ಲದೇ ಅಭ್ಯರ್ಥಿಗಳು ಸಲ್ಲಿಸುವ ಯಾವುದಾದರೂ ಪ್ರಮಾಣ ಪತ್ರಗಳು ನಕಲಿ/ ಸುಳ್ಳು ಪ್ರಮಾಣ ಪತ್ರವೆಂದು ಸಾಬೀತಾದರೇ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಮತ್ತು ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರಬೇಕುಎಂದು ಈ ಮೂಲಕ ತಿಳಿಸಿದೆ.</u> |

ಮಾರ್ಚ್ ಮತ್ತು ಏಪ್ರಿಲ್ ಮಾಹೆಯ ನೀರಿನ ಬಿಲ್ ವಿಳಂಬ ಪಾವತಿಯ ಬಡ್ಡಿ ಮನ್ನಾ

**ಬೆಂಗಳೂರು, ಮೇ 16 ( ಕರ್ನಾಟಕ ವಾರ್ತೆ ):**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸುಮಾರು 9.94 ಲಕ್ಷ ಗ್ರಾಹಕರುಗಳಿಗೆ ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿರುತ್ತದೆ. ಆದರೆ ಕೋವಿಡ್-19 ಹರಡುತ್ತಿರುವ ಕಾರಣ ಸರ್ಕಾರದಿಂದ ಲಾಕ್‌ಡೌನ್ ಘೋಷಿಸಿದ್ದ ಹಿನ್ನೆಲೆಯಲ್ಲಿ ನಗರಾದ್ಯಂತ ಮಾರ್ಚ್ ಮತ್ತು ಏಪ್ರಿಲ್ 2020 ರ ಮಾಹೆಯ ನೀರಿನ ಶುಲ್ಕವನ್ನು ಪಾವತಿಸದೇ ಇರುವ ಗ್ರಾಹಕರು ಮೇ-2020 ರ ಮಾಹೆಯ ಅಂತ್ಯದೊಳಗೆ ಪಾವತಿಸಿದ್ದಲ್ಲಿ ಅಂತಹ ಗ್ರಾಹಕರಿಗೆ ಮಾರ್ಚ್ ಮತ್ತು ಏಪ್ರಿಲ್ 2020ರ ಮಾಹೆಯ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

Waiving of the interest amount on late payment of March & April 2020 water bills

**Bengaluru, May 16 (Karnataka Information)**

BWSSB is providing water supply and sewerage facilities to approximately 9.94 lakhs consumers under BBMP limits. As government has announced Lockdown due to pandemic COVID -19, the consumers who have not paid water bill of March and April -2020, can pay the water bills within the month of May 2020. The interest on water bills of March and April-2020 will be waived off says Official Press Release